# ಶಿಲ್ಪಕಲಾ ವೈಭವ



ಅಮೃತಕ್ಕಾಗಿ ಮಂದಾರ ಪರ್ವತವನ್ನು ಕಡೆಗೋಲಾಗಿಸಿ ಸರ್ಪಗಳ ಒಡೆಯ ವಾಸುಕಿಯನ್ನು ಹಗ್ಗವಾಗಿಸಿ ಕ್ಷೀರ ಸಾಗರವನ್ನು ಕಡೆದ ಕತೆಯಿದೆ. ರಾಕ್ಷಸರು ತಲೆ ಕಡೆ ಹಿಡಿದು ಮತ್ತು ದೇವತೆಗಳು ಬಾಲವನ್ನು ಹಿಡಿದು ಕಡೆಯುತ್ತಿರುವ ದೃಶ್ಯದ ಶಿಲ್ಪ ಕಲಾಕೃತಿ ಕೆ.ಆರ್. ಪೇಟೆ ತಾಲ್ಲೂಕು ಹೊಸ ಹೊಳಲು ಗ್ರಾಮದ ಶ್ರೀ ಲಕ್ಷ್ಮೀನಾರಾಯಣ ದೇವಾಲಯದ ಹೊರ ಭಿತ್ತಿಯಲ್ಲಿ ದೆ. ಇಂದಿಗೂ ಹಾಳಾಗದೆ ಪ್ರವಾಸಿಗಳ ಮನಸೂರೆಗೊಳ್ಳುತ್ತದೆ.

**-ಕೆ.ಎನ್. ಪ್ರಭಾಕರ ಗುಪ್ತ, ಹಾಸನ**



# ಪೇಪರ್ ಕಮಾಲ್

ಚಿತ್ರದಲ್ಲಿ ಕಾಣುತ್ತಿರುವ ಕಲಾಕೃತಿ ಡ್ರಾಯಿಂಗ್ ಪೇಪರ್‌ನಿಂದ ಮಾಡಿದ್ದು. ಸಾಗರ ತಾಲ್ಲೂಕಿನ ಉಪ್ಪಳ್ಳಿ ಗ್ರಾಮದ ಅಂಜಲಿರಾವ್ ವಿದ್ಯಾಭ್ಯಾಸದ ಮಧ್ಯೆ ಪೇಪರ್‌ನಲ್ಲಿ ನಾನಾ ಆಕೃತಿಗಳನ್ನು ಕತ್ತರಿಸುವಲ್ಲಿ ಪರಿಣಿತರು. ಇವರು ಸುಮಾರು 50 ರಿಂದ 60 ಬಣ್ಣದ ಡ್ರಾಯಿಂಗ್ ಪೇಪರನ್ನು ಬಳಸಿ ನೈಜತೆಯಿಂದ ಕೂಡಿದ ಈ ಸುಂದರ ಹಂಸ ಪಕ್ಷಿಯನ್ನು ರೂಪಿಸಿರುವುದು ಅವರ ಕೈಚಳಕಕ್ಕೆ ಒಂದು ನಿದರ್ಶನವಲ್ಲವೇ!

**-ವಿ.ಸಿ. ಪಾಟೀಲ, ಸಾಗರ**

# ನಿಷ್ಕಾಮ ಸೇವಾಕಾರ್ಯ

ಚಿತ್ರದಲ್ಲಿರುವವರು ಸುರೇಶ್. ಜಿ. ದೊಣ್ಣೆ. ಉದಯೋನ್ಮುಖ ಶಿಲ್ಪಿ. ಹೊಸನಗರ ತಾಲ್ಲೂಕಿನ ಜೇನಿ ಗ್ರಾಮದವರು. ನಾನು ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿದ ಶಾಲೆ, ಇವರು ವಿದ್ಯಾಭ್ಯಾಸ ಮಾಡಿದ ಶಾಲೆ ಒಂದೇ. ಪ್ರಸ್ತುತ ಇವರು ತಾವು ಓದಿದ ಶಾಲೆಗೆ 9 ಅಡಿ ಎತ್ತರದ ವಿದ್ಯಾ ದೇವತೆ ಶಾರದಾ ಮಾತೆಯ ವಿಗ್ರಹವನ್ನು ತಯಾರಿಸಿ ಕೊಡುಗೆ ನೀಡಿದ್ದಾರೆ. ಬಿಡಿಗಾಸು ಪಡೆಯದೆ ಮಾಡಿರುವ ಇವರ ನಿಷ್ಕಾಮ ಸೇವೆ ಶ್ಲಾಘನೀಯ ಹಾಗೂ ಅಪರೂಪ.

**-ಸೋಮ ಮಂಡಘಟ್ಟ, ಶಿವಮೊಗ್ಗ**

